ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ
ವಿಜಯ ಮಹಾಂತೇಶ ಕೃಪಾಪೋಷಿತ

# ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿಜಯ ಶಂಕರಪ್ಪ ಬೆಳ್ಳಿಹಾಳ ವಾಣಿಜ್ಯ ಪದವಿ ಮಹಾವಿದ್ಯಾಲಯ, ಹುನಗುಂದ

ನ್ಯಾಕ್‌ದಿಂದ "B+" ಶ್ರೇಣಿ ಪಡೆದಿದೆ

# PROSPECTUS 2020-21



## ಪರಿಚಯ ಪುಸ್ತಕ

Scanned with OKEN Scanner



ಕಾಲೇಜು ವಿದ್ಯಾರ್ಥಿ ಒಕ್ಕೂಟದ ಉದ್ಘಾಟನೆ ಮಾಡುತ್ತಿರುವ ಮುಖ್ಯ ಅತಿಥಿಗಳಾದ ಶ್ರೀ ಎಂ.ಎಂ. ಜಾಬಿಯವರು



ಕಾಲೇಜು ಒಕ್ಕೂಟ ಉದ್ಘಾಟನೆಯಲ್ಲಿ ಮಾತನಾಡುತ್ತಿರುವ ಪೂಜ್ಯಶ್ರೀಗಳು



ಕಾಲೇಜು ಒಕ್ಕೂಟ ಉದ್ಘಾಟನೆಯಲ್ಲಿ ಮಾತನಾಡುತ್ತಿರುವ ವಿ.ಮ.ವಿ.ವ. ಸಂಘದ ಗೌರವ ಕಾರ್ಯದರ್ಶಿ ಶ್ರೀ ಬಿ.ಎಂ. ಹೊಕ್ರಾಣಿ



ಮಹಿಳಾ ವೇದಿಕೆಯ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿರುವ ಶರಣೆ ದೊಡ್ಡಮ್ಮನವರು ಹವಾಲ್ದಾರ



ಹಳೆಯ ವಿದ್ಯಾರ್ಥಿ ಕಾರ್ಯಕ್ರಮ ಉದ್ಘಾಟಿಸುತ್ತಿರುವ ಡಾ. ಎಂ.ಎಸ್. ದಡ್ಡೆಣ್ಣವರ ಮತ್ತು ಗಣ್ಯರು



ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿನಿಗೆ ಪ್ರಾಚಾರ್ಯ ಶ್ರೀಮತಿ ಎಸ್. ಕೆ. ಮಠ ಅವರು ಪುಸ್ತಕ ವಿತರಿಸುತ್ತಿರುವದು.



ಹಳೆಯ ವಿದ್ಯಾರ್ಥಿ ಸಭೆಯಲ್ಲಿ ಮಾತನಾಡುತ್ತಿರುವ ಹಳೆಯ ವಿದ್ಯಾರ್ಥಿ ಶ್ರೀಯುತ ಮಹೇಶ ಕೆ. ಕಕರಡ್ಡಿ ವಿಶ್ರಾಂತ ಎಗ್ಸಿಕ್ಯೂಟಿವ್ ಇಂಜನೀಯರರು



ಸಭಾಭವನ ಕಟ್ಟಡಕ್ಕೆ ಅಡಿಗಲ್ಲು ನೆರವೇರಿಸುತ್ತಿರುವ ವ್ಹಿ.ಮ.ವಿ.ವ. ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀಯುತ ಬಿ.ಎಂ. ಹೊಕ್ರಾಣಿಯವರು

ಸ್ಥಾಪನೆ : 1967 ದೂರವಾಣಿ : 08351-260224

ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ
ವಿಜಯ ಮಹಾಂತೇಶ ಕೃಪಾಪೋಷಿತ

## ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿಜಯ ಶಂಕರಪ್ಪ ಬೆಳ್ಳಿಹಾಳ ವಾಣಿಜ್ಯ ಪದವಿ ಮಹಾವಿದ್ಯಾಲಯ, ಹುನಗುಂದ

ಬಾಗಲಕೋಟ ಜಿಲ್ಲೆ

ನ್ಯಾಕ್‌ದಿಂದ 'ಬಿ+' ಶ್ರೇಣಿ ಪಡೆದಿದೆ

# ವಿದ್ಯಾರ್ಥಿ ಮಾಹಿತಿ ಕೈಪಿಡಿ

# PROSPECTUS

# 2020-21



Scanned with OKEN Scanner

## ಸಂಕಲ್ಪ

ಈ ಗ್ರಾಮೀಣ ಭಾಗದಲ್ಲಿ ಶಿಕ್ಷಣಾಭಿವೃದ್ಧಿಗಾಗಿ ಸುಸಜ್ಜಿತವಾದ ಶಿಕ್ಷಣ ಸಂಸ್ಥೆಯೊಂದರ ಸ್ಥಾಪನೆಯ ಅವಶ್ಯಕತೆಯನ್ನು ಈಡೇರಿಸಲು ಈ ಮಹಾವಿದ್ಯಾಲಯವನ್ನು ಪ್ರಾರಂಭಿಸಲಾಯಿತು.

ಈ ಸಂಸ್ಥೆಯ ಸಂಸ್ಥಾಪಕರಾದ ಪೂಜ್ಯ ಶ್ರೀ ಗುರುಬಸವಾರ್ಯ ಮಠ ಗುರುಗಳು ತಮ್ಮ ಇಡೀ ಜೀವನವನ್ನು ಶಿಕ್ಷಣಕ್ಕಾಗಿ ಮುಡುಪಾಗಿಟ್ಟಿದ್ದರು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣವನ್ನು ನೀಡುವದು ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನೊಳಗೊಂಡ ಆಧುನಿಕ ಶಿಕ್ಷಣವನ್ನು ಧಾರೆಯೆರೆದು ಅವರಲ್ಲಿಯ ಜ್ಞಾನಜ್ಯೋತಿ ಪ್ರಕಾಶಿಸುವಂತೆ ಮಾಡುವದು ಶ್ರೀ ಗುರುಬಸವಾರ್ಯರ ಮುಖ್ಯ ಕನಸಾಗಿತ್ತು. ವಿದ್ಯೆಯ ಮೂಲಕ ಸಂಪಾದಿಸಿದ ಜ್ಞಾನದಿಂದ ಮಾತ್ರ ಅಜ್ಞಾನ ಮತ್ತು ಅಂಧ ಶ್ರದ್ಧೆಗಳನ್ನು ಹೋಗಲಾಡಿಸಲು ಸಾಧ್ಯ.

ವಿದ್ಯಾರ್ಥಿಗಳಲ್ಲಿ ಪ್ರೀತಿ, ಸಮಾನತೆ, ಸಹಕಾರ ಮನೋಭಾವ ಸಹೋದರತ್ವ, ಸಹಿಷ್ಣುತೆ, ನಿಸ್ವಾರ್ಥ ಭಾವ ಮತ್ತು ವಿಶ್ವ ಬಂಧುತ್ವಗಳಂಥ ಮಾನವೀಯ ಮೌಲ್ಯಗಳನ್ನು ತುಂಬಿ, ಅವರನ್ನು ಆದರ್ಶ ಸಮಾಜದಲ್ಲಿ ಬಾಳಲು ಯೋಗ್ಯರಾಗುವಂಥ ಮಾನವ ಜೀವಿಗಳನ್ನಾಗಿ ರೂಪಿಸುವದೇ ನಮ್ಮ ಮಹಾವಿದ್ಯಾಲಯದ ಗುರಿಯಾಗಿದೆ.

## ಧ್ಯೇಯ

ಶಿಕ್ಷಣದ ಮೂಲಕ ಯುವಜನಾಂಗದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳನ್ನು ತುಂಬುವದು.



## ಉದ್ದೇಶಗಳು

1. ಪದೇ ಪದೇ ಬರಗಾಲಕ್ಕೆ ತುತ್ತಾಗುವ ಈ ಗ್ರಾಮೀಣ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುವದು ಮತ್ತು ಅವರ ಜ್ಞಾನಜ್ಯೋತಿ ಬೆಳಗುವಂತೆ ಮಾಡುವದು.
2. ವಿದ್ಯಾರ್ಥಿಗಳಲ್ಲಿ ಮಾನಸಿಕ, ದೈಹಿಕ, ನೈತಿಕ ಮತ್ತು ಬೌದ್ಧಿಕ ಬೆಳವಣಿಗೆ ಯನ್ನುಂಟು ಮಾಡುವದು.
3. ಯುವಕರಲ್ಲಿ ಸಚ್ಚಾರಿತ್ರ್ಯ, ಸಹಕಾರ, ಶಿಸ್ತು, ನಾಯಕತ್ವಗುಣ, ಜ್ಯಾತ್ಯಾತೀತ ದೃಷ್ಟಿಕೋನ, ದೇಶಾಭಿಮಾನ ಮತ್ತು ನಿಸ್ವಾರ್ಥ ಸೇವಾಗುಣಗಳನ್ನು ಬೆಳಸುವದು.
4. ಸೂಕ್ತ ಅವಕಾಶಗಳನ್ನು ಗುರುತಿಸಿ ಉದ್ಯೋಗ ಸಂಪಾದನೆಗೆ ವಿದ್ಯಾರ್ಥಿ/ನಿಯರಿಗೆ ಮಾರ್ಗದರ್ಶನ ನೀಡುವುದು.
5. ದೇಶದ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅರಿತು ಕೊಳ್ಳುವಂತೆ ಮಾಡುವದು.
6. ಶೈಕ್ಷಣಿಕ ಕ್ಷೇತ್ರದಲ್ಲಿ ನವೀನ ತಂತ್ರಜ್ಞಾನವನ್ನು ಬಳಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವದು.
7. ವಿದ್ಯಾರ್ಥಿಗಳು ಸಾಮಾಜಿಕ ಹೊಣೆಗಾರಿಕೆಯುಳ್ಳವರೂ, ಪ್ರಗತಿಪರ ದೃಷ್ಟಿ ಕೋನವುಳ್ಳವರೂ, ಒಳ್ಳೆಯ ನಾಗರಿಕರೂ ಆಗುವಂತೆ ಮಾಡುವದು ಅಲ್ಲದೆ ಅವರು ಅವಶ್ಯಕ ಸಾಮರ್ಥ್ಯ ಮತ್ತು ಹಿರಿಮೆಯನ್ನು ಸಾಧಿಸುವಂತೆ ಉತ್ತೇಜಿಸುವದು.
8. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುವದು.



Scanned with OKEN Scanner

# ನಮ್ಮ ಹೆಮ್ಮೆಯ ಮಹಾವಿದ್ಯಾಲಯ



ಪ್ರಿಯ ವಿದ್ಯಾರ್ಥಿ/ನಿಯರೆ,

ಸನ್ 1967ರಲ್ಲಿ ಆರಂಭಗೊಂಡ ಈ ಮಹಾವಿದ್ಯಾಲಯ ಈ ಭಾಗದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿ ಹೊರಹೊಮ್ಮಿದೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ರೂಪಿಸುವಲ್ಲಿ ಶ್ರಮಿಸುತ್ತಿದೆ. ಅಂತೆಯೇ, ರಾಷ್ಟ್ರೀಯ ಶೈಕ್ಷಣಿಕ ಮೌಲ್ಯಮಾಪನ ಸಮಿತಿಯ (ನ್ಯಾಕ್) ಇಲ್ಲಿನ ಬೋಧಕ ಸಿಬ್ಬಂದಿಯ ನಿರಂತರ ಪರಿಶ್ರಮ, ಕಾರ್ಯಾಲಯದ ದಾಖಲಾತಿಗಳ ಅಚ್ಚುಕಟ್ಟುತನ, ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಹಾಗೂ ಮೂಲಭೂತ ಸೌಕರ್ಯಗಳನ್ನೆಲ್ಲ ಪರಿಶೀಲಿಸಿ ಮರುಮಾನ್ಯತೆ ನೀಡಿ 'ಬಿ+' ಶ್ರೇಣಿ ಕೊಟ್ಟಿದ್ದು ಮಹಾವಿದ್ಯಾಲಯದ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ.

ಬೆಳಗಾವಿಯ ರಾಣಿಚನ್ನಮ್ಮ ವಿಶ್ವವಿದ್ಯಾಲಯದ ಶಾಶ್ವತ ಸಂಲಗ್ನತೆ ಪಡೆದ ಈ ಮಹಾವಿದ್ಯಾಲಯದಲ್ಲಿ ಬಿ.ಎ, ಬಿ.ಎಸ್‌ಸಿ, ಬಿ.ಕಾಂ, ತರಗತಿಗಳಿಗೆ ಪ್ರವೇಶ ನೀಡಲಾಗುತ್ತದೆ. ಪರಿಣಿತ ಪ್ರಾಧ್ಯಾಪಕರಿಂದ ಸೂಕ್ತ ಮಾರ್ಗದರ್ಶನ, ಬೋಧನೆಯಲ್ಲಿ ಡಿಜಿಟಲ್ ತಂತ್ರಜ್ಞಾನದ ಬಳಕೆ, ಜ್ಞಾನಾರ್ಜನೆಗೆ ಪೂರಕವಾದ ವಾತಾವರಣ, ಪರಿಣಾಮಕಾರಿ ಬೋಧನಾ ವಿಧಾನ, ಸುಸಜ್ಜಿತ ಪ್ರಯೋಗಾಲಯಗಳು, ಜೀವಶಾಸ್ತ್ರದ ವಸ್ತು ಸಂಗ್ರಹಾಲಯ, ಗಣಕೀಕೃತ ಗ್ರಂಥಾಲಯ, ಎನ್.ಸಿ.ಸಿ ಮತ್ತು ಎನ್.ಎಸ್.ಎಸ್ ಘಟಕಗಳು, ವಿಶಾಲ ಆಟದ ಮೈದಾನ, ಮಲ್ಟಿ ಜಿಮ್, ಶುದ್ಧ ಕುಡಿಯುವ ನೀರಿನ ಘಟಕ ಮುಂತಾದ ಮೂಲಭೂತ ಸೌಕರ್ಯಗಳನ್ನು ಈ ಮಹಾವಿದ್ಯಾಲಯ ಹೊಂದಿದೆ. ವ್ಯಕ್ತಿತ್ವ ವಿಕಸನ, ಶಿಬಿರ ಪ್ರತಿ ರವಿವಾರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ ತರಗತಿಗಳನ್ನು ನಡೆಸುವುದು, ಉದ್ಯೋಗ ಮೇಳಗಳಂತಹ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಸ್ಪಂದಿಸುವ ಸಂಸ್ಥೆ ನಮ್ಮದು. ವಿದ್ಯಾರ್ಥಿ ಮಿತ್ರರೆ, ಇಂತಹ ಉನ್ನತ ಗುಣಮಟ್ಟದ ಮಹಾವಿದ್ಯಾಲಯಕ್ಕೆ, ನಿಮಗೆ ಹಾರ್ದಿಕ ಸ್ವಾಗತ. ನಿಮ್ಮ ವಿದ್ಯಾಭ್ಯಾಸದಲ್ಲಿ ಸಮಗ್ರ ಪ್ರಗತಿ ಲಭಿಸಲೆಂದು ಹಾರೈಸುತ್ತೇನೆ.

**ಪ್ರೊ. (ಶ್ರೀಮತಿ) ಎಸ್.ಕೆ. ಮಠ** ಪ್ರಾಚಾರ್ಯರು

ಮೊ: 7019160026



# ಪ್ರಾಧ್ಯಾಪಕರ ಹಾಗೂ ಪ್ರಾಧ್ಯಾಪಕೇತರ ವರ್ಗ

**ಪ್ರಾಚಾರ್ಯರು**

1. ಪ್ರೊ. (ಶ್ರೀಮತಿ) ಎಸ್.ಕೆ. ಮಠ

**ಕನ್ನಡ ವಿಭಾಗ**

1. ಪ್ರೊ. ಬಿ.ಬಿ. ಕಡ್ಲಿ
2. ಡಾ. ಡಿ.ಎಸ್. ತಿಪ್ಪೇಸ್ವಾಮಿ
3. ಡಾ. ಎಂ.ಬಿ. ಒಂಟಿ

**ಇಂಗ್ಲೀಷ್ ವಿಭಾಗ**

1. ಡಾ. ಎಸ್.ಆರ್. ಗೋಲಗೊಂಡ
2. ಡಾ. ಎಸ್.ಎಸ್. ದರಗಾದ
3. ಪ್ರೊ. ಎನ್. ವ್ಹಿ. ಪಾಟೀಲ

**ಹಿಂದಿ ವಿಭಾಗ**

1. ಪ್ರೊ. ಮಹ್ಮದರಫೀಕ ಖಾತೇವಾಡ

**ರಾಜ್ಯಶಾಸ್ತ್ರ ವಿಭಾಗ**

1. ಡಾ. ಪರಶುರಾಮ ಸಿ.
2. ಪ್ರೊ. ಬಿ.ಎಚ್. ಗೋಡಿ

**ಸಮಾಜಶಾಸ್ತ್ರ ವಿಭಾಗ**

1. ಪ್ರೊ. ವ್ಹಿ. ಪಿ. ರಾಯರ

**ಅರ್ಥಶಾಸ್ತ್ರ ವಿಭಾಗ**

1. ಪ್ರೊ. ಎಫ್.ಎಂ. ರಾಮವಾಡಗಿ

**ಇತಿಹಾಸ ವಿಭಾಗ**

1. ಪ್ರೊ. ಎಸ್.ಆರ್. ನಾಗಣ್ಣವರ

**ಪ್ರಾಣಿಶಾಸ್ತ್ರ ವಿಭಾಗ**

1. ಪ್ರೊ. ಎಸ್.ಎ. ಮೇಟಿ

**ಸಸ್ಯಶಾಸ್ತ್ರ ವಿಭಾಗ**

1. ಪ್ರೊ. (ಶ್ರೀಮತಿ) ಎಸ್.ಕೆ. ಮಠ

**ರಸಾಯನಶಾಸ್ತ್ರ ವಿಭಾಗ**

1. ಪ್ರೊ. ಶ್ರೀನಿಧಿ ಆರ್. ಎ.
2. ಡಾ. ಬಿ. ಎಂ. ಹಲಸಂಗಿ
3. ಪ್ರೊ. ಎನ್. ಎ. ಖಾಜಿ

**ಗಣಿತಶಾಸ್ತ್ರ**

1. ಪ್ರೊ. ಎಲ್.ಎನ್. ಕುಲಕರ್ಣಿ
2. ಪ್ರೊ. (ಶ್ರೀಮತಿ) ಎಸ್.ಬಿ. ಅಮಲಿಕೊಪ್ಪ

**ಭೌತಶಾಸ್ತ್ರ ವಿಭಾಗ**

1. ಪ್ರೊ. ಎ.ಎಚ್. ತೇಲಿ
2. ಪ್ರೊ. ಮಹೇಶ ಮಾದರ

**ವಾಣಿಜ್ಯ ವಿಭಾಗ**

1. ಪ್ರೊ. ಆರ್. ಪಿ. ಮಹೇಂದ್ರಕರ
2. ಪ್ರೊ. ಬಿ.ಎ. ಕಂಠಿ
3. ಪ್ರೊ. ಎಸ್. ಎಸ್. ಪಾಟೀಲ

**ಕಂಪ್ಯೂಟರ್ ವಿಭಾಗ**

1. ಪ್ರೊ. ಬಿ. ಎಸ್. ಹೊಸಮನಿ

**ದೈಹಿಕ ಶಿಕ್ಷಣ**

1. ಶ್ರೀ ಎಸ್.ಬಿ. ಚಳಗೇರಿ



Scanned with OKEN Scanner

**ಗ್ರಂಥಾಲಯ**

| | | |
|---|---|---|
| 1. | ಶ್ರೀ ಎಂ.ಎಸ್. ದರಗದ | ಗ್ರಂಥಪಾಲಕರು |
| 2. | ಶ್ರೀಮತಿ ಎಂ.ಎಸ್. ಜಂಬಗಿ | ಸಹಾಯಕ ಗ್ರಂಥಪಾಲಕರು |
| 3. | ಶ್ರೀ ಐ. ಎಸ್. ಇಟಗಿ | ಅಟೆಂಡರ್ |
| 4. | ಶ್ರೀ ಎಸ್.ಎಸ್. ಗೋಲಪ್ಪನವರ | ಅಟೆಂಡರ್ |

**ಶಿಕ್ಷಕೇತರ ಸಿಬ್ಬಂದಿ**

| | | |
|---|---|---|
| 1. | ಬಿ. ಐ. ಅಮ್ಮಜಿಗೋಳ | ಪ್ರ.ದ.ಸ. |
| 2. | ಶ್ರೀಮತಿ ಎಮ್.ಎಸ್. ಬಾಗಲಕೋಟಿ | ದ್ವಿ.ದ.ಸ. |
| 3. | ಶ್ರೀ ಎಸ್.ಎಸ್. ಪಡಶೆಟ್ಟಿ | ದ್ವಿ.ದ.ಸ. |

**ತಾತ್ಕಾಲಿಕ ಶಿಕ್ಷಕೇತರ ಸಿಬ್ಬಂದಿ**

| | | |
|---|---|---|
| 1. | ಶ್ರೀ ಎ.ಜೆ. ಹಿರೇಮಠ | ದ್ವಿ.ದ.ಸ. |
| 2. | ಶ್ರೀ ಕೆ.ಎಂ. ವಾಲೀಕಾರ | ದ್ವಿ.ದ.ಸ. |
| 3. | ಶ್ರೀ ಎಸ್.ಆರ್. ಸುಂಕಾಪೂರ | ಸಿಪಾಯಿ |
| 4. | ಶ್ರೀ ಎಸ್.ಎಂ. ಶಿರೂರ | " |
| 5. | ಶ್ರೀಮತಿ ಮಂಜುಳಾ ಬೆಣ್ಣಿ | " |
| 6. | ಶ್ರೀ ಗಣೇಶ ಮಲ್ಲಾಡದ | ಕಾವಲುಗಾರ |
| 7. | ಶ್ರೀ ಗದ್ದೆಪ್ಪ ಹುಬ್ಬಳ್ಳಿ | |

* * * * *



## ಪ್ರವೇಶ ನಿಯಮಗಳು

1. ವಿದ್ಯಾರ್ಥಿಯು ಯಾವುದೇ ತರಗತಿಗೆ ಪಡೆಯುವ ಪ್ರವೇಶವು ಕೇವಲ ಒಂದು ವರ್ಷಕ್ಕೆ ಮಾತ್ರ ಸೀಮಿತವಾಗಿದ್ದು; ಮುಂದಿನ ತರಗತಿಗೆ ಪ್ರವೇಶ ಪಡೆಯಲು ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆಯುವ ಕಾಲಕ್ಕೆ ಮೂಲ ಅಂಕಪಟ್ಟಿ, ಮೂಲ ಎಲ್.ಸಿ/ಟಿ.ಸಿ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರಗಳನ್ನು ಹಾಜರಪಡಿಸಬೇಕು.
3. ಒಮ್ಮೆ ತುಂಬಿದ ಫೀ ಹಣವನ್ನು ಯಾವುದೇ ಸಂದರ್ಭದಲ್ಲಿ ಮರಳಿ ಕೊಡಲಾಗುವದಿಲ್ಲ.
4. ವರ್ಷದ ಮಧ್ಯೆ ಪ್ರವೇಶ ರದ್ದುಪಡಿಸಿದಾಗ ಆ ವರ್ಷದ ಪೂರ್ಣ ಫೀ ತುಂಬತಕ್ಕದ್ದು.
5. ಪ್ರಯೋಗಾಲಯದ ಉಪಕರಣ ಒಡೆದಲ್ಲಿ, ದಂಡ ಹಾಕಿದಲ್ಲಿ ಸಕಾಲದಲ್ಲಿ ಹಣ ತುಂಬಬೇಕು.
6. ವಿದ್ಯಾರ್ಥಿಗಳು ಭದ್ರತಾ ಠೇವಣಿ ಹಣವನ್ನು ಶೈಕ್ಷಣಿಕ ವರ್ಷ ಮುಗಿದ ನಂತರ ಹಾಗೂ ಮುಂದಿನ ಶೈಕ್ಷಣಿಕ ವರ್ಷದ ಸಪ್ಟಂಬರ್‌ದಿಂದ ಮಾರ್ಚ್ 31ರ ಒಳಗಾಗಿ ಪಡೆಯಬಹುದು.
7. ಕನಿಷ್ಠ ಪ್ರತಿಶತ 75 ರಷ್ಟು ಹಾಜರಾತಿ ಅವಶ್ಯ.
8. ಸಮವಸ್ತ್ರ ಹಾಗೂ ಗುರುತಿನ ಪತ್ರವನ್ನು ಕಡ್ಡಾಯ ಮಾಡಲಾಗಿದೆ.
9. ಮಹಾವಿದ್ಯಾಲಯದ ಮಾಹಿತಿಗಳನ್ನು ಪ್ರಕಟನಾ ಫಲಕದಲ್ಲಿ ಪ್ರಕಟಿಸಲಾಗುವದು. ವಿದ್ಯಾರ್ಥಿಗಳು ಕಡ್ಡಾಯವಾಗಿ ನಿತ್ಯ ಗಮನಿಸುತ್ತಿರಬೇಕು.
10. ಅನಿವಾರ್ಯ ಸಂದರ್ಭದಲ್ಲಿ ವರ್ಗಕ್ಕೆ ಗೈರುಹಾಜರಾಗುವಂತಿದ್ದರೆ. ರಜಾಚೀಟಿ ನೀಡಿ ಮುಂಚಿತವಾಗಿ ಅನುಮತಿ ಪಡೆಯಬೇಕು.



Scanned with OKEN Scanner

**ಕಾಲೇಜು ಕ್ಯಾಂಪಸ್ :**

ಹುನಗುಂದ-ಚಿತ್ರವಾಡಗಿ ರಸ್ತೆಗೆ ಹೊಂದಿಕೊಂಡು 21 ಎಕರೆ ವಿಶಾಲವಾದ ಸ್ವಂತ ಜಾಗೆಯಲ್ಲಿ ಕಾಲೇಜು ನೆಲೆಸಿದ್ದು, 8 ಪ್ರತ್ಯೇಕ ಕಟ್ಟಡಗಳ ಸಂಕೀರ್ಣವನ್ನು ಹೊಂದಿದೆ. ಸಸ್ಯಶಾಸ್ತ್ರ ಉದ್ಯಾನವನ ಹಾಗೂ ಹಸಿರು ವನಗಳನ್ನೊಳಗೊಂಡ ಮಾಲಿನ್ಯ ರಹಿತ, ಪ್ರಶಾಂತ ವಾತಾವರಣ ವಿದ್ಯಾರ್ಜನೆಗೆ ಪೂರಕವಾಗಿದೆ.

## ನಮ್ಮ ಗ್ರಂಥಾಲಯ

ಈ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ 45,624 ಗ್ರಂಥಗಳನ್ನು ಒಳಗೊಂಡ ಗಣಕೀಕೃತ, ವಿಶಾಲವಾದ ಪ್ರತ್ಯೇಕ ಗ್ರಂಥಭಂಡಾರವಿದ್ದು, ವೃತ್ತಿ ಮಾರ್ಗದರ್ಶನ ನೀಡುವ ಸೌಲಭ್ಯವೂ ಇದೆ.

| ವಿಭಾಗ | ಪುಸ್ತಕಗಳು | ನಿಯತಕಾಲಿಕೆಗಳ ಸಂಖ್ಯೆ | |
|---|---|---|---|
| ಕಲಾ ವಿಭಾಗ | 31,201 | ರಾಜ್ಯಮಟ್ಟ | 40 |
| ವಿಜ್ಞಾನ ವಿಭಾಗ | 10,538 | ರಾಷ್ಟ್ರಮಟ್ಟ | 08 |
| ವಾಣಿಜ್ಯ ವಿಭಾಗ | 3,360 | ದಿನ ಪತ್ರಿಕೆಗಳು | 08 |
| ಆಧಾರ ಗ್ರಂಥಗಳು | 940 | - | |
| ಒಟ್ಟು | 46,039 | | 56 |

1. ಸಂಪೂರ್ಣ ಗಣಕೀಕೃತಗೊಂಡ ಗ್ರಂಥಾಲಯವು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಮುಂಜಾನೆ 9-00 ರಿಂದ ಸಾಯಂಕಾಲ 5-00 ರ ವರೆಗೆ ಹಾಗೂ ಶನಿವಾರ ಮುಂಜಾನೆ 9-00 ರಿಂದ ಮಧ್ಯಾಹ್ನ 2-00 ರ ವರೆಗೆ ತೆರೆದಿರುತ್ತದೆ. ಪರೀಕ್ಷಾ ಪೂರ್ವದಲ್ಲಿ ಮು. 8 ರಿಂದ ಸಂಜೆ 6 ರವರೆಗೆ.
2. ಪ್ರತಿ ವಿದ್ಯಾರ್ಥಿ ಒಂದು ಸಲಕ್ಕೆ ಎರಡು ಪುಸ್ತಕಗಳನ್ನು ಗರಿಷ್ಠ 15 ದಿನಗಳ ವರೆಗೆ ಎರವಲಾಗಿ ಪಡೆಯಬಹುದು. ಅಲ್ಲದೆ ಪದವಿ ವಿದ್ಯಾರ್ಥಿಗಳಿಗೆ ಬುಕ್‌ಬ್ಯಾಂಕ್ ಯೋಜನೆಯಡಿ ವಾರ್ಷಿಕ ಪರೀಕ್ಷೆಯವರೆಗೆ ಎರಡು ಪುಸ್ತಕಗಳನ್ನು ಎರವಲಾಗಿ ಕೊಡಲಾಗುವದು.
3. ಎಸ್.ಸಿ & ಎಸ್.ಟಿ ವಿದ್ಯಾರ್ಥಿ/ನಿಯರಿಗಾಗಿ ಪ್ರತ್ಯೇಕವಾಗಿ 2 ಪುಸ್ತಕಗಳನ್ನು ಹೆಚ್ಚಿಗೆ ಕೊಡಲಾಗುವುದು.
4. ಗ್ರಂಥಾಲಯದಿಂದ ಪಡೆದ ಪುಸ್ತಕಗಳನ್ನು ವಾರ್ಷಿಕ ಪರೀಕ್ಷೆ ಪ್ರಾರಂಭವಾಗುವ ಮೊದಲೇ ಮರಳಿ ಕೊಟ್ಟು, ಕ್ಲಿಯರನ್ಸ ಸರ್ಟಿಫಿಕೇಟ್ ಪಡೆಯಬೇಕು.



5. ಗ್ರಂಥಗಳಲ್ಲಿ ಬರೆಯುವುದಾಗಲಿ, ಪುಟಗಳನ್ನು ಹರಿಯುವುದಾಗಲಿ ಮಾಡಿದಲ್ಲಿ ಆ ಪುಸ್ತಕದ ಮುಖಬೆಲೆಯ ಎರಡು ಪಟ್ಟು ಹಣ ದಂಡದರೂಪದಲ್ಲಿ ನೀಡಬೇಕಾಗುವದು.

**ಪ್ರಯೋಗಾಲಯ :**

ಎಲ್ಲ ಉಪಕರಣ-ಸಲಕರಣೆಗಳಿಂದ ಕೂಡಿದ ಸುಸಜ್ಜಿತ, ಪ್ರತ್ಯೇಕ ವಿಶಾಲವಾದ ಕಟ್ಟಡದಲ್ಲಿ ಪ್ರಯೋಗಾಲಯಗಳಿವೆ ಮತ್ತು ಜೀವಶಾಸ್ತ್ರ ಸಂಗ್ರಹಾಲಯವಿದೆ.

**ಕ್ರೀಡಾಂಗಣ ಮತ್ತು ವ್ಯಾಯಾಮಕೇಂದ್ರ :**

ಮಹಾವಿದ್ಯಾಲಯಕ್ಕೆ ಹೊಂದಿಕೊಂಡೇ ವಿಶಾಲವಾದ ಆಟದ ಮೈದಾನವಿದೆ. ಕಬಡ್ಡಿ, ಖೋ-ಖೋ, ಕ್ರಿಕೆಟ್, ವ್ಹಾಲಿಬಾಲ್, ಬಾಸ್ಕೆಟ್ ಬಾಲ್, ಟೆನಿಕ್ವಾಯ್ಟ್ ಮುಂತಾದ ಆಟಗಳ ಸೌಲಭ್ಯವಿದೆ. ನಮ್ಮ ಅನೇಕ ಕ್ರೀಡಾಪಟುಗಳು ವಿಶ್ವವಿದ್ಯಾಲಯ ಮಟ್ಟದಲ್ಲಿ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ನಮ್ಮ ಕಾಲೇಜನ್ನು ಪ್ರತಿನಿಧಿಸಿದ ಹೆಮ್ಮೆ ನಮ್ಮದಾಗಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ನೆರವಿನಿಂದ ಅತ್ಯಾಧುನಿಕ ವ್ಯಾಯಾಮ ಸಾಮಗ್ರಿಗಳನ್ನು ಖರೀದಿಸಿ 'ಜಿಮ್' (ವ್ಯಾಯಾಮ ಕೇಂದ್ರ) ಸ್ಥಾಪಿಸಲಾಗಿದೆ.

**ಉಚಿತ ಪ್ರಸಾದ ನಿಲಯ, ವಿದ್ಯಾರ್ಥಿ/ನಿಯರ ನವೀನ ವಸತಿ ಗೃಹಗಳು :**

ಸನ್ 1945 ರಲ್ಲಿ ಸ್ಥಾಪನೆಗೊಂಡ ವಿಜಯ ಮಹಾಂತೇಶ ಉಚಿತ ಪ್ರಸಾದ ನಿಲಯವನ್ನು ಸರಕಾರದ ಅನುದಾನವಿಲ್ಲದೆ ಸಾರ್ವಜನಿಕರ ಸಹಾಯದಿಂದ ಸಮರ್ಪಕವಾಗಿ ನಡೆಸಿಕೊಂಡು ಬರಲಾಗಿದೆ. ಬಡ ವಿದ್ಯಾರ್ಥಿ/ನಿಯರಿಗೆ ಇಲ್ಲಿ ಪ್ರಸಾದ ಸೌಲಭ್ಯವಿದೆ. ಮೆಟ್ರಿಕ್ ನಂತರದ ವಿದ್ಯಾರ್ಥಿ/ನಿಯರಿಗೆ ಪ್ರತ್ಯೇಕವಾಗಿ ಅನುದಾನಿತ ವಸತಿ ನಿಲಯಗಳು ಸ್ಥಾಪನೆಗೊಂಡಿದ್ದು ಅವುಗಳಲ್ಲಿ 150 ಜನ ವಿದ್ಯಾರ್ಥಿಗಳಿಗೆ ಮತ್ತು 75 ಜನ ವಿದ್ಯಾರ್ಥಿನಿಯರಿಗೆ ಪ್ರವೇಶ ಕಲ್ಪಿಸಲಾಗಿದೆ.

**ಎನ್.ಸಿ.ಸಿ ಮತ್ತು ಎನ್.ಎಸ್.ಎಸ್ ಘಟಕಗಳು :**

ನಮ್ಮ ಮಹಾವಿದ್ಯಾಲಯದಲ್ಲಿ ಎನ್.ಸಿ.ಸಿ ಮತ್ತು ಎನ್.ಎಸ್.ಎಸ್ ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಾಮಾಜಿಕ ಸೇವೆಯ ಅರಿವನ್ನು ಮೂಡಿಸುವಲ್ಲಿ ಶ್ರಮಿಸುತ್ತಿವೆ.

**ಹಳೆಯ ವಿದ್ಯಾರ್ಥಿಗಳ ಸಂಘ :**

ಸನ್ 2003-04ರಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವನ್ನು ಪ್ರಾರಂಭಿಸಲಾಯಿತು. ಈ ಸಂಘದ ವತಿಯಿಂದ



Scanned with OKEN Scanner

ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆದ ಮತ್ತು ಶೇ 80ಕ್ಕೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿಯರಿಗೆ 2 ಪುಸ್ತಕಗಳ ಹೆಚ್ಚಿನ ನೆರವು ನೀಡಲಾಗುತ್ತಿದೆ.

**ವಾರ್ಷಿಕ ಸಂಚಿಕೆ :**

ಪ್ರತಿ ವರ್ಷ ವಿದ್ಯಾರ್ಥಿ/ನಿಯರಲ್ಲಿ ಅಡಗಿದ ಸುಪ್ತ ಪ್ರತಿಭೆಯನ್ನು ಹೊರಹಾಕುವ ದೃಷ್ಟಿಯಿಂದ ಸ್ವರಚಿತ ಲೇಖನ, ಕವನ ಹಾಗೂ ವರ್ಷದುದ್ದಕ್ಕೂ ಜರುಗಿದ ವೈವಿಧ್ಯಮಯ ಕಾರ್ಯಕ್ರಮಗಳ ಸಮೀಕ್ಷೆಯನ್ನು ಒಳಗೊಂಡಿರುವ ವಾರ್ಷಿಕ ಸಂಚಿಕೆಯನ್ನು ಹೊರತರಲಾಗುತ್ತಿದೆ.

**ಸರಕಾರದ ಶಿಷ್ಯವೇತನ ಸೌಲಭ್ಯ :**

**ವಿದ್ಯಾರ್ಥಿ/ನಿಯರಿಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳು ನೀಡುವ ವಿವಿಧ ಶಿಷ್ಯವೇತನಗಳು :**

1. ಕೇಂದ್ರ ಸರಕಾರದ ರಾಷ್ಟ್ರೀಯ ಪ್ರತಿಭಾ ಶಿಷ್ಯವೇತನ.
2. ಹಿಂದುಳಿದ ವರ್ಗಗಳ ವಿದ್ಯಾರ್ಥಿ/ನಿಯರಿಗೆ ಮೀಸಲಾದ ರಾಜ್ಯ ಸರಕಾರದ ಶಿಷ್ಯ ವೇತನಗಳು.
3. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿ/ನಿಯರಿಗೆ ಭಾರತ ಸರಕಾರದ ಶಿಷ್ಯ ವೇತನಗಳು.
4. ಮಾಜಿ ಸೈನಿಕರ ಮಕ್ಕಳಿಗಾಗಿ ಶಿಷ್ಯ ವೇತನಗಳು.
5. ಹಿಂದಿ ಮಾತೃಭಾಷೆಯಲ್ಲದವರಿಗಾಗಿ ಇರುವ ಶಿಷ್ಯವೇತನಗಳು.
6. ಅರ್ಹ ಬಡ ವಿದ್ಯಾರ್ಥಿ/ನಿಯರಿಗಾಗಿ ಮೀಸಲಾದ ಶಿಷ್ಯವೇತನಗಳು.
7. ಅಂಗವಿಕಲ ವಿದ್ಯಾರ್ಥಿ/ನಿಯರಿಗೆ ಶಿಷ್ಯವೇತನಗಳು.
8. ಜಿಂದಾಲ್ ಶಿಷ್ಯವೇತನ.
9. ಸಂಜೆ ಹೊನ್ನಮ್ಮ ಶಿಷ್ಯವೇತನ.
10. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಶಿಷ್ಯವೇತನ.
11. ಸಿ.ವ್ಹಿ. ರಾಮನ್ ಶಿಷ್ಯವೇತನ.
12. ಪುರಸಭೆಯಿಂದ ಎಸ್.ಸಿ/ಎಸ್.ಟಿ ವಿದ್ಯಾರ್ಥಿ/ನಿಯರಿಗೆ ಶಿಷ್ಯವೇತನ.

**ಸ್ಥಳೀಯ ಶಿಷ್ಯವೇತನಗಳು :**

ನಮ್ಮ ಸಂಸ್ಥೆಯ ಅಭಿಮಾನಿಗಳು ಪದವಿ ವಿದ್ಯಾರ್ಥಿ/ನಿಯರಿಗೆ ನಗದು ರೂಪದ ಶಿಷ್ಯವೇತನಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತ ಬಂದಿದ್ದಾರೆ. ಹಾಗೂ ಮಹಾವಿದ್ಯಾಲಯದಿಂದ ಫಲಕ (ಶೀಲ್ಡ) ಗಳನ್ನು ನೀಡಲಾಗುತ್ತದೆ.



1. **ಶ್ರೀ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ ಶಿಷ್ಯ ವೇತನ :**
   ಬಿ.ಎ/ಬಿ.ಎಸ್.ಸಿ ಭಾಗ-1, ಭಾಗ-2 ಮತ್ತು ಭಾಗ-3ರಲ್ಲಿ ಸತತವಾಗಿ ನಮ್ಮ ಮಹಾವಿದ್ಯಾಲಯದಲ್ಲಿ ಓದಿ, ಮೊದಲ ಪ್ರಯತ್ನದಲ್ಲಿಯೇ ಉತ್ತೀರ್ಣರಾಗಿ, ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ, ಸಚ್ಚಾರಿತ್ರ್ಯವುಳ್ಳ ವಿದ್ಯಾರ್ಥಿ/ನಿಯರಿಗೆ.

2. **ಶ್ರೀ ಬಿ.ಎಸ್. ಗಣಾಚಾರಿ ಶಿಷ್ಯವೇತನ :**
   ಬಿ.ಎ, ಬಿ.ಎಸ್.ಸಿ & ಬಿ.ಕಾಂ ಅಂತಿಮ ವರ್ಷದ ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯದ ನಿಯಮಾನುಸಾರ (3ನೇ ವರ್ಷದ ಕೊನೆಗೆ ಹಿಂದಿನ ವರ್ಷಗಳ ಅಂಕಗಳನ್ನು ಪರಿಗಣಿಸಿ) ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ನಿಯರಿಗೆ.

3. **ಶ್ರೀಮತಿ ಬಸಮ್ಮ ಬಸಯ್ಯ ಸಾವಳಗಿಮಠ ಶಿಷ್ಯವೇತನ :**
   ವಿಜ್ಞಾನ ವಿಭಾಗದ ವರ್ಷದ ಶ್ರೇಷ್ಠ ವಿದ್ಯಾರ್ಥಿ/ನಿಗೆ.

4. **ಡಾ॥ ಪಂಚಾಕ್ಷರಿ ಹಿರೇಮಠ ಶಿಷ್ಯವೇತನ :**
   ಪ್ರತಿಭಾ ಪುರಸ್ಕಾರ ಸಮಾರಂಭದ ಅಂಗವಾಗಿ ನಡೆಯುವ ಕನ್ನಡ, ಇಂಗ್ಲೀಷ ಮತ್ತು ಹಿಂದಿ **ಭಾಷಣ ಸ್ಪರ್ಧೆ**ಗಳಲ್ಲಿ (ಪ್ರಥಮ & ದ್ವಿತೀಯ ಸ್ಥಾನದಲ್ಲಿ) ವಿಜೇತರಾದವರಿಗೆ.

5. **ಶ್ರೀಮತಿ ಲಕ್ಷ್ಮೀಬಾಯಿ ನಾರಾಯಣರಾವ್ ವಿಟಾವಕರ ಶಿಷ್ಯವೇತನ :**
   1. ಬಿ.ಎಸ್‌ಸಿ ಅಂತಿಮ ವರ್ಷದ ಪರೀಕ್ಷೆಯಲ್ಲಿ (V & VIನೇ ಸೆಮ್‌ಗಳಲ್ಲಿ ಮಾತ್ರ) ಸಸ್ಯಶಾಸ್ತ್ರ ವಿಷಯದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ನಿಗೆ.
   2. ವರ್ಷದ ಶ್ರೇಷ್ಠ ಕ್ರೀಡಾಪಟುವಿಗೆ.

6. **ಶ್ರೀಮತಿ ಬಸಮ್ಮ ಕಂಠಿ ಶಿಷ್ಯವೇತನ :**
   ಬಿ.ಎಸ್‌ಸಿ. ಅಂತಿಮ ವರ್ಷದ ಪರೀಕ್ಷೆಯಲ್ಲಿ (V & VI **ಸೆಮ್‌ಗಳಲ್ಲಿ ಮಾತ್ರ**) **ರಸಾಯನಶಾಸ್ತ್ರ** ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿ/ನಿಗೆ.

07. **ಶ್ರೀಮತಿ ಅಕ್ಕಮ್ಮ ಮುದಗಲ್ಲ ಶಿಷ್ಯವೇತನ :** ವಾಣಿಜ್ಯ ವಿಭಾಗದ ಶ್ರೇಷ್ಠ ವಿದ್ಯಾರ್ಥಿ/ನಿಗೆ.

08. **ಶ್ರೀ ರಾಘವೇಂದ್ರ ಮುದಗಲ್ಲ ಶಿಷ್ಯವೇತನ :**
   ಬಿ.ಎ ಅಂತಿಮ ವರ್ಷದ ಪರೀಕ್ಷೆಯಲ್ಲಿ (V & VI **ಸೆಮ್‌ಗಳಲ್ಲಿ ಮಾತ್ರ**) **ಸಮಾಜಶಾಸ್ತ್ರ** ವಿಷಯದಲ್ಲಿ ಪ್ರಥಮ ಸ್ಥಾನ ಪಡೆದವರಿಗೆ.

09. **ಶ್ರೀ ಎಚ್. ತೇಜಪ್ಪ ಹಾಗೂ ಶ್ರೀ ಎಸ್. ಎಸ್. ಮಾಟಲದಿನ್ನಿ ಶಿಷ್ಯವೇತನ :**
   ಶ್ರೀ ಎಚ್. ತೇಜಪ್ಪ, ಶ್ರೀ ಎಸ್. ಎಸ್. ಮಾಟಲದಿನ್ನಿ ಹಾಗೂ ರಾಷ್ಟ್ರೀಯ ಹೆದ್ದಾರಿಯ ಎಂಜನೀಯರರು ಮತ್ತು ಗುತ್ತಿಗೆದಾರರು ನೀಡಿದ ಶಿಷ್ಯವೇತನ-ಕಲಾ,



Scanned with OKEN Scanner

ವಿಜ್ಞಾನ & ವಾಣಿಜ್ಯ ಪದವಿ ಅಂತಿಮ (V & VI ಸೆಮ್‌ಗಳಲ್ಲಿ ಮಾತ್ರ) ವರ್ಗಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ.

**10. ದಿ. ಕುಮಾರ ಎಮ್. ಜಿ. ಇಲಕಲ್ಲ ಇವರ ಸ್ಮರಣಾರ್ಥ ಶಿಷ್ಯವೇತನ :**
ಸನ್ 2000-01ರಲ್ಲಿ ಬಿ.ಎಸ್.ಸಿ ಭಾಗ-2ರಲ್ಲಿ ಓದುತ್ತಿದ್ದ ವಿದ್ಯಾರ್ಥಿ/ನಿಯರು ಕೊಡಮಾಡಿದ ಬಿ.ಎಸ್‌ಸಿ. ಭಾಗ-3ರಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ನಿಗೆ.

**11. ಶ್ರೀಮತಿ ದಾನಮ್ಮ ಚನ್ನವೀರಪ್ಪ ಹೊನವಾಡ ಶಿಷ್ಯವೇತನ :**
ಬಿ.ಎಸ್‌ಸಿ 3ರ ಪರಿಕ್ಷೇಯಲ್ಲಿ (V & VI ಸೆಮ್‌ಗಳಲ್ಲಿ ಮಾತ್ರ) ಭೌತಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕ ಪಡೆದವರಿಗಾಗಿ.

**12. ದಿ. ಕುಮಾರಿ ಮಲ್ಲಮ್ಮ ಬೆಳ್ಳಿಹಾಳ ಸ್ಮರಣಾರ್ಥ ಶಿಷ್ಯವೇತನ :**
ಸನ್. 2002-03ರಲ್ಲಿ ಬಿ.ಎ ಭಾಗ 2ರಲ್ಲಿ ಓದುತ್ತಿದ್ದ ವಿದ್ಯಾರ್ಥಿ/ನಿಯರು ಕೊಡಮಾಡಿದ ಬಿ.ಎ ಭಾಗ -2 (III ಮತ್ತು IVನೇ ಸೆಮ್‌ದಲ್ಲಿ ಮಾತ್ರ)ದಲ್ಲಿ ಪ್ರಥಮ ಬಂದವರಿಗೆ.

**13. ಶ್ರೀ ವೀರಣ್ಣ ಬಸಪ್ಪ ಜಮಖಂಡಿ ಶಿಷ್ಯವೇತನ :**
ಬಿ.ಎ 3ರ ಪರೀಕ್ಷೆಯಲ್ಲಿ (V & VI ಸೆಮ್‌ಗಳಲ್ಲಿ ಮಾತ್ರ) ಇಂಗ್ಲೀಷ ಐಚ್ಛಿಕ ವಿಷಯದಲ್ಲಿ ಪ್ರಥಮ ಸ್ಥಾನ ಪಡೆದವರಿಗೆ.

**14. ಪ್ರೊ. ಎಂ. ಸಿ. ಅಕ್ಕಿ ಶಿಷ್ಯವೇತನ :ಶ್ರೀಮತಿ ಗಂಗಮ್ಮ ಬಸಪ್ಪ ಅಕ್ಕಿ ಇವರ ಸ್ಮರಣಾರ್ಥ :**
ಬಿ.ಎ ಅಂತಿಮ ವಿಭಾಗ (V & VI ಸೆಮ್‌ಗಳಲ್ಲಿ)ದಲ್ಲಿ ಪ್ರಥಮ ಬಂದವರಿಗೆ.

**15. ಶ್ರೀ ವ್ಹಿ. ಸಿ. ಚಟ್ಟೇರ ಶಿಷ್ಯವೇತನ :**
ಬಿ.ಕಾಂ 3 ರ ವರ್ಷದ ಶ್ರೇಷ್ಠ ವಿದ್ಯಾರ್ಥಿ/ನಿಗೆ.

**16. ಶ್ರೀ ವಿನೋದ ಕೃಷ್ಣರಾವ ಕುಲಕರ್ಣಿ ಶಿಷ್ಯವೇತನ :**
ಬಿ.ಎ 3ರ ಪರೀಕ್ಷೆಯಲ್ಲಿ (V & VI ಸೆಮ್‌ಗಳಲ್ಲಿ ಮಾತ್ರ) ಇಂಗ್ಲೀಷ ಐಚ್ಛಿಕ ವಿಷಯದಲ್ಲಿ ಪ್ರಥಮ ಬಂದವರಿಗೆ.

**17. ಶ್ರೀ ಶಂಕ್ರಪ್ಪ ಎಸ್. ಬೆಳ್ಳಿಹಾಳ ಶಿಷ್ಯವೇತನ :** ಬಿ.ಕಾಂ. 3ರಲ್ಲಿ (ವಿ.ವಿ. ನಿಯಮಾನುಸಾರ I ರಿಂದ VI ನೇ ಸೆಮ್ ವರೆಗೆ) ಅತಿ ಹೆಚ್ಚು ಅಂಕ ಪಡೆದ, ಸಚ್ಚಾರಿತ್ರ್ಯವುಳ್ಳವರಿಗೆ.

**18. ಶ್ರೀ ದೊಡ್ಡಬಸು ಗು. ವಡವಡಗಿ ಶಿಷ್ಯವೇತನ :** ಬಿ.ಎ. 3ರ ವರ್ಷದ ಶ್ರೇಷ್ಠ ವಿದ್ಯಾರ್ಥಿ/ನಿಗೆ.



**19. ಶ್ರೀಮತಿ ಮಹಾದೇವಮ್ಮ ಸಂಗಪ್ಪ ನಾಗರಾಳ :**
ಬಿ.ಎಸ್.ಸಿ. 3ರ ವರ್ಷದ ಶ್ರೇಷ್ಠ ವಿದ್ಯಾರ್ಥಿ/ನಿಗೆ.

**20. ಶ್ರೀ ಎಸ್.ಆರ್. ಕಡಿವಾಲ** ಅವರ ತಂದೆ ಲಿಂ. ಶ್ರೀ ರುದ್ರಪ್ಪ ಚ. ಕಡಿವಾಲ ಇವರ ಸ್ಮರಣಾರ್ಥ; ಬಿ.ಎ 1,2,3 (6 ಸೆಮ್ ಪರಿಗಣಿಸಿ) ರಲ್ಲಿ ಕನ್ನಡ ಐಚ್ಛಿಕ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ.

**21. ಪ್ರೊ. ಬಿ.ಎಂ. ಚಲವಾದಿ** ಅವರ ತಾಯಿ ಲಿಂ. ಶ್ರೀಮತಿ ಯಲ್ಲಮ್ಮ ಮ. ಚಲವಾದಿ ಇವರ ಸ್ಮರಣಾರ್ಥ; ಬಿ.ಎ. ಅಂತಿಮ ವರ್ಷದ (V & VI ಸೆಮ್) ಐಚ್ಛಿಕ ವಿಷಯ-ಇತಿಹಾಸದಲ್ಲಿ ಹೆಚ್ಚು ಅಂಕ ಪಡೆದವರಿಗೆ.

**22.** 2016-17ನೇ ಸಾಲಿನ ಬಿ.ಕಾಂ. ಭಾಗ 3ರ ವಿದ್ಯಾರ್ಥಿ/ನಿಯರು ಕೊಡಮಾಡಿದ **ದಿ. ಕುಮಾರ ಮುತ್ತಣ್ಣ ಶ. ಕುಂಟೋಜಿ** ಇವರ ಸ್ಮರಣಾರ್ಥ ಪ್ರತಿವರ್ಷ ಬಿ.ಕಾಂ. Vನೇ ಸೆಮ್‌ದಲ್ಲಿ ಅತಿ ಹೆಚ್ಚು ಅಂಕಗಳಿಸಿದವರಿಗೆ.

**23. ಡಾ. ಎಸ್.ವಾಯ್. ಮುಲ್ಕಿಪಾಟೀಲ** ಶಿಷ್ಯವೇತನ ಬಿ.ಎಸ್‌ಸಿ. ಅಂತಿಮ ವರ್ಷದಲ್ಲಿ (V & VI ಸೆಮ್) ಪಾಸಾಗಿ ಸಸ್ಯಶಾಸ್ತ್ರದಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿ/ನಿಗೆ

**24. ಶ್ರೀ ಬಸಪ್ಪ ಹಿರಣ್ಣಪ್ಪ ಆಲೂರ** ಇವರ ಸ್ಮರಣಾರ್ಥ-ಶ್ರೀ ಮಹಾಂತೇಶ ಆಲೂರ ಅವರಿಂದ ಬಿ.ಎ. ಅಂತಿಮ ವರ್ಷದಲ್ಲಿ (V & VI ಸೆಮ್)
1) ಕನ್ನಡ ಐಚ್ಛಿಕ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ &
2) ವರ್ಷದ ಶ್ರೇಷ್ಠ ಕ್ರೀಡಾ ಪಟುವಿಗೆ.

**25. ಶ್ರೀ ಶಶಿಕುಮಾರ ಸಂಗಪ್ಪ ಹಗೇದಾಳ (ಭಾರತೀಯ ಸೇನಾ ಪಡೆ) ವರ್ಷದ ಶ್ರೇಷ್ಠ** ಎನ್.ಸಿ.ಸಿ. ಕೆಡೆಟ್‌ಗೆ.

**26. ಶ್ರೀ ಮಲ್ಲಿಕಾರ್ಜುನ ನೀಲಪ್ಪ ಕುರಿ (ಭಾರತೀಯ ಸೇನಾ ಪಡೆ) ವರ್ಷದ ಶ್ರೇಷ್ಠ** ಕ್ರೀಡಾಪಟುವಿಗೆ.

**27. ಶ್ರೀ ನಾಗರಾಜ ಯಲ್ಲಪ್ಪ ಕಬ್ಬರಗಿ (ಭಾರತೀಯ ಸೇನಾ ಪಡೆ) ದೆಹಲಿಯ ಟಿ.ಎಸ್.ಸಿ. ಶಿಬಿರದಲ್ಲಿ ಭಾಗವಹಿಸಿದ ಕೆಡೆಟ್‌ಗೆ.**

**ಶೀಲ್ಡುಗಳು :** 1. ವರ್ಷದ ಕಲಾ ವಿಭಾಗದ ಶ್ರೇಷ್ಠ ವಿದ್ಯಾರ್ಥಿ/ನಿಗೆ
2. ವರ್ಷದ ವಿಜ್ಞಾನ ವಿಭಾಗದ ಶ್ರೇಷ್ಠ ವಿದ್ಯಾರ್ಥಿ/ನಿಗೆ
3. ವರ್ಷದ ವಾಣಿಜ್ಯ ವಿಭಾಗದ ಶ್ರೇಷ್ಠ ವಿದ್ಯಾರ್ಥಿ/ನಿಗೆ
4. ವರ್ಷದ ಶ್ರೇಷ್ಠ ಕ್ರೀಡಾಪಟುವಿಗೆ

* * * * *



Scanned with OKEN Scanner

## ಬೋಧನಾ ವಿಷಯಗಳ ಆಯ್ಕೆ

2005-06ನೇ ಶೈಕ್ಷಣಿಕ ವರ್ಷದಿಂದ ಬಿ.ಎ., ಬಿ.ಎಸ್‌ಸಿ. ಹಾಗೂ ಬಿ.ಕಾಂ. ತರಗತಿಗಳಿಗೆ ಸೆಮಿಸ್ಟರ್ ಪದ್ಧತಿ ಅಳವಡಿಸಿದ್ದು, ಅದರ ಅನ್ವಯ ಬೋಧನಾ ವಿಷಯಗಳು ಮತ್ತು ಸಂಯೋಜನೆಯ ಆಯ್ಕೆ ವಿಧಾನ.

### ಬಿ.ಎ. ಭಾಗ – 1

#### Iನೇ ಹಾಗೂ IIನೇ ಸೆಮಿಸ್ಟರ

**ಭಾಗ – 1:** **ಅವಶ್ಯಕ ಭಾಷಾ ವಿಷಯಗಳು–** ಎರಡು ಭಾಷಾ ವಿಷಯಗಳನ್ನು ಅಭ್ಯಸಿಸಬೇಕು. ಇಂಗ್ಲೀಷ ಭಾಷೆಯ ಅಧ್ಯಯನ ಕಡ್ಡಾಯ; ಉಳಿದ ಎರಡು ಭಾಷಾ ವಿಷಯಗಳಲ್ಲಿ ಕನ್ನಡ ಅಥವಾ ಹಿಂದಿಯನ್ನು ಆಯ್ದುಕೊಳ್ಳಬೇಕು.

ವಿ.ಸೂ. : ಪ್ರತಿ ವಿಷಯದಲ್ಲಿ ಕನಿಷ್ಠ 15 ವಿದ್ಯಾರ್ಥಿಗಳು ಇರಬೇಕು. 15ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರೆ. ಅವರಿಗೆ ಅಂತಿಮ ದಿನಾಂಕದಂದು ಬೇರೆ ವಿಷಯ ತೆಗೆದುಕೊಳ್ಳಲು ಅವಕಾಶ ನೀಡಲಾಗುತ್ತದೆ.

**ಭಾಗ – 2:** **ಐಚ್ಛಿಕ ವಿಷಯಗಳು–** ಮೂರು ಐಚ್ಛಿಕ ವಿಷಯಗಳನ್ನು ಅಭ್ಯಸಿಸಬೇಕು. ಈ ಕೆಳಗಿನ ಯಾವುದಾದರು ಒಂದು **ಸಂಯೋಜನೆಯನ್ನು** ಆಯ್ದುಕೊಳ್ಳಬಹುದಾಗಿದೆ. (ಕನ್ನಡ ಐಚ್ಛಿಕ ವಿಷಯಕ್ಕೆ ಕನಿಷ್ಠ 05 ವಿದ್ಯಾರ್ಥಿಗಳು)

1. ಕನ್ನಡ. ಇತಿಹಾಸ. ಸಮಾಜಶಾಸ್ತ್ರ
2. ಕನ್ನಡ. ಇತಿಹಾಸ. ರಾಜ್ಯಶಾಸ್ತ್ರ
3. ಕನ್ನಡ. ಸಮಾಜಶಾಸ್ತ್ರ, ರಾಜ್ಯಶಾಸ್ತ್ರ
4. ಇಂಗ್ಲೀಷ. ಇತಿಹಾಸ. ಸಮಾಜಶಾಸ್ತ್ರ
5. ಇಂಗ್ಲೀಷ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ
6. ಇಂಗ್ಲೀಷ. ಇತಿಹಾಸ. ರಾಜ್ಯಶಾಸ್ತ್ರ
7. ಹಿಂದಿ. ಇತಿಹಾಸ, ರಾಜ್ಯಶಾಸ್ತ್ರ
8. ಹಿಂದಿ. ಅರ್ಥಶಾಸ್ತ್ರ. ಇತಿಹಾಸ
9. ಹಿಂದಿ, ಕನ್ನಡ, ಇತಿಹಾಸ
10. ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ
11. ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ
12. ಅರ್ಥಶಾಸ್ತ್ರ, ಕನ್ನಡ, ಇತಿಹಾಸ



**ಭಾಗ – 3 :** **ಕಡ್ಡಾಯ ವಿಷಯಗಳು :**

1ನೇ ಸೆಮಿಸ್ಟರ – ಭಾರತದ ಸಂವಿಧಾನ (Indian Constitution)

2ನೇ ಸೆಮಿಸ್ಟರ– ಮಾನವ ಹಕ್ಕುಗಳ ಬೆಳವಣಿಗೆ ಹಾಗೂ ಪರಿಸರ ಅಧ್ಯಯನ (Human Rights Development and Environment Studies)

### ಬಿ.ಎ. ಭಾಗ–2

**ಮೂಲ ವಿಷಯಗಳು :** ಇಂಗ್ಲೀಷ, ಕನ್ನಡ / ಹಿಂದಿ

**ಐಚ್ಛಿಕ ವಿಷಯಗಳು :** ಬಿ.ಎ. ಭಾಗ–1 ರಲ್ಲಿ ಆಯ್ದುಕೊಂಡ ವಿಷಯಗಳು III & IV ನೇ ಸೆಮಿಸ್ಟರ್‌ನಲ್ಲಿ ಮುಂದುವರೆಯುವವು.

**ಕಡ್ಡಾಯ ವಿಷಯ :** 3ನೇ ಸೆಮಿಸ್ಟರ್ – ವ್ಯಕ್ತಿತ್ವ ವಿಕಸನ ಮತ್ತು ಸಂವಹನ ಕೌಶಲ್ಯ (ಪಿ.ಡಿ.ಸಿ.ಎಸ್.)

4ನೇ ಸೆಮಿಸ್ಟರ್ – ಕಂಪ್ಯೂಟರ್ ಅಪ್ಲಿಕೇಶನ್ಸ

### ಬಿ.ಎ. ಭಾಗ – 3

**ಅವಶ್ಯಕ ವಿಷಯ :** ಕನ್ನಡ (ಒಂದು ವಿಷಯ ಮಾತ್ರ)

**ಐಚ್ಛಿಕ ವಿಷಯಗಳು :** ಬಿ.ಎ. ಭಾಗ–1 ರಲ್ಲಿ ಆಯ್ಕೆಮಾಡಿಕೊಂಡ 3 ವಿಷಯಗಳೇ V & VI ನೇ ಸೆಮಿಸ್ಟರ್‌ನಲ್ಲಿ 2–2 ಪತ್ರಿಕೆಗಳಾಗಿ ಮುಂದುವರೆಯುತ್ತವೆ.

### ಬಿ.ಎಸ್‌ಸಿ. ಭಾಗ– 1

#### Iನೇ ಹಾಗೂ IIನೇ ಸೆಮಿಸ್ಟರ್

**ಭಾಗ – 1:** **ಭಾಷಾ ವಿಷಯಗಳು–**ಎರಡು ಭಾಷಾ ವಿಷಯಗಳನ್ನು ಅಭ್ಯಸಿಸಬೇಕು. ಇಂಗ್ಲೀಷ ಭಾಷೆಯ ಅಧ್ಯಯನ ಕಡ್ಡಾಯ; ಉಳಿದ ಎರಡು ಭಾಷಾ ವಿಷಯಗಳಲ್ಲಿ ಕನ್ನಡ ಅಥವಾ ಹಿಂದಿಯನ್ನು ಆಯ್ದುಕೊಳ್ಳಬೇಕು.

ವಿ.ಸೂ. : ಪ್ರತಿ ವಿಷಯದಲ್ಲಿ ಕನಿಷ್ಠ 15 ವಿದ್ಯಾರ್ಥಿಗಳು ಇರಬೇಕು. 15ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರೆ, ಅಂತಿಮ ದಿನಾಂಕದಂದು ಬೇರೆ ವಿಷಯ ತೆಗೆದುಕೊಳ್ಳಲು ಅವರಿಗೆ ಅವಕಾಶ ನೀಡಲಾಗುತ್ತದೆ.



Scanned with OKEN Scanner

ಭಾಗ – 2: ಐಚ್ಛಿಕ ವಿಷಯಗಳು :

ಮೂರು ಐಚ್ಛಿಕ ವಿಷಯಗಳನ್ನು ಅಭ್ಯಸಿಸಬೇಕು.

ಈ ಕೆಳಗಿನ ಬೇಕಾದ ಒಂದು ಸಂಯೋಜನೆಯನ್ನು ಆಯ್ದುಕೊಳ್ಳಬೇಕು.

1. ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ (PCM)
2. ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ (CBZ)

ಭಾಗ – 3: ಕಡ್ಡಾಯ ವಿಷಯಗಳು :

1ನೇ ಸೆಮೆಸ್ಟರ್– ಭಾರತದ ಸಂವಿಧಾನ (Indian Constitution)

2ನೇ ಸೆಮೆಸ್ಟರ್–ಮಾನವ ಹಕ್ಕುಗಳ ಬೆಳವಣಿಗೆ ಹಾಗೂ ಪರಿಸರ ಅಧ್ಯಯನ

(Human Rights Development and Environment Studies)

## ಬಿ.ಎಸ್‌ಸಿ. ಭಾಗ–2

ಮೂಲ ವಿಷಯಗಳು : ಇಂಗ್ಲೀಷ, ಕನ್ನಡ / ಹಿಂದಿ

ಐಚ್ಛಿಕ ವಿಷಯಗಳು : ಬಿ.ಎಸ್‌ಸಿ. ಭಾಗ–1 ರಲ್ಲಿ ಆಯ್ದುಕೊಂಡ ವಿಷಯಗಳೇ III & IV ನೇ ಸೆಮೆಸ್ಟರ್‌ನಲ್ಲಿ ಮುಂದುವರೆಯುವವು.

ಕಡ್ಡಾಯ ವಿಷಯ : 3ನೇ ಸೆಮೆಸ್ಟರ್ – ವ್ಯಕ್ತಿತ್ವ ವಿಕಸನ ಮತ್ತು ಸಂವಹನ ಕೌಶಲ್ಯ (PDCS)

4ನೇ ಸೆಮೆಸ್ಟರ್ – ಕಂಪ್ಯೂಟರ್ ಅಪ್ಲಿಕೇಶನ್ಸ (CA)

## ಬಿ.ಎಸ್‌ಸಿ. ಭಾಗ–3

**ಬಿ.ಎಸ್‌ಸಿ. ಭಾಗ– 1 ರಲ್ಲಿ ಆಯ್ಕೆಮಾಡಿಕೊಂಡ ಐಚ್ಛಿಕ ವಿಷಯಗಳು ಮಾತ್ರ V & VI ನೇ ಸೆಮೆಸ್ಟರನಲ್ಲಿ ಮುಂದುವರೆಯುತ್ತವೆ.**

## ಬಿ.ಕಾಂ. ಭಾಗ–1

### Iನೇ ಸೆಮೆಸ್ಟರ್

ಭಾಗ – 1: ಭಾಷಾ ವಿಷಯಗಳು (Basic Languages)

1. ಕನ್ನಡ (Kannnada) 2. ಇಂಗ್ಲೀಷ (English)

ಭಾಗ – 2: (ಅ) ಕಡ್ಡಾಯ ವಿಷಯಗಳು (Compulsory Subjects)

3. ಹಣಕಾಸಿನ ಲೆಕ್ಕಶಾಸ್ತ್ರ–1 (Financial Accounting-1)
4. ವ್ಯವಹಾರ ನಿರ್ಧಾರಗಳಿಗಾಗಿ ಮಾರುಕಟ್ಟೆ ವಿಶ್ಲೇಷಣೆ (Market Analysis for Business Decision)



5. ಕಂಪನಿ ಕಾಯ್ದೆ & ಆಡಳಿತ (Company Law & Administration)
6. ವ್ಯವಹಾರ ಪರಿಸರ (Business Environment)

ಭಾಗ – 3: 7. ಪ್ರಾಯೋಗಿಕ ಕೌಶಲ್ಯ ಅಭಿವೃದ್ಧಿ (Practicals on skill Development)

ಭಾಗ – 4: 8. ಭಾರತದ ಸಂವಿಧಾನ (Indian Constitution)

9. ಹೆಚ್ಚಿನ ಸಹಪಠ್ಯ ಚಟುವಟಿಕೆಗಳು (Extra Co-curricular Activities)

### IIನೇ ಸೆಮೆಸ್ಟರ್

ಭಾಗ – 1: ಭಾಷಾ ವಿಷಯಗಳು (Basic Languages)

1. ಕನ್ನಡ (Kannnada) 2. ಇಂಗ್ಲೀಷ (English)

ಭಾಗ – 2: (ಅ) ಕಡ್ಡಾಯ ವಿಷಯಗಳು (Compulsory Subjects)

3. ಆಧುನಿಕ ವ್ಯವಸ್ಥಾಪನೆಯ ತಂತ್ರಗಳು (Modern Management Techniques)
4. ಹಣಕಾಸಿನ ಲೆಕ್ಕಶಾಸ್ತ್ರ–2 (Financial Accounting-2)
5. ಆಧುನಿಕ ಮಾರಾಟ ಪ್ರಕ್ರಿಯಾ ವ್ಯವಸ್ಥಾಪನೆ (Modern Marketing Management)
6. ಹೂಡಿಕೆಯ ವ್ಯವಸ್ಥಾಪನೆ (Investment Management)
7. ಇ–ವಾಣಿಜ್ಯ ಮತ್ತು ಆಧುನಿಕ ವ್ಯವಹಾರ (E-Commerce & Modern Business)

ಭಾಗ – 3: 8. ಪ್ರಾಯೋಗಿಕ ಕೌಶಲ್ಯ ಅಭಿವೃದ್ಧಿ (Practicals on Skill Development)

ಭಾಗ – 4: 9. ಹೆಚ್ಚಿನ ಸಹಪಠ್ಯ ಚಟುವಟಿಕೆಗಳು (Extra Co-curricular Activities)

## ಬಿ.ಕಾಂ. ಭಾಗ–2

### IIIನೇ ಸೆಮೆಸ್ಟರ್

ಭಾಗ – 1: ಅವಶ್ಯಕ ವಿಷಯ : 1. ಕನ್ನಡ

ಭಾಗ – 2: ಕಡ್ಡಾಯ ವಿಷಯಗಳು :

1. ಕಿರುಕುಳ ನಿರ್ವಹಣೆ (Retail Management)
2. ಬ್ಯಾಂಕಿಂಗ್ ಕಾನೂನು ಮತ್ತು ಆಚರಣೆ (Banking Law and Practice)
3. ಕಂಪನಿಯ ಲೆಕ್ಕಶಾಸ್ತ್ರ–1 (Corporate Accounting-1)
4. ಔದ್ಯಮಿಕ ಅರ್ಥಶಾಸ್ತ್ರ (Industrial Economics)
5. ಉದ್ಯಮಶೀಲತಾ ಅಭಿವೃದ್ಧಿ ತತ್ವಗಳು (Principles of Enterprenurship Development)



Scanned with OKEN Scanner

6. ವ್ಯವಹಾರಿಕ ಸಂಖ್ಯಾಶಾಸ್ತ್ರ-1 (Business Statistics-1)
7. ವ್ಯವಹಾರದಲ್ಲಿ ಗಣಕಯಂತ್ರದ ಬಳಕೆ-2 (Computer Application in Business-2)

## IVನೇ ಸೆಮಿಸ್ಟರ್

**ಭಾಗ – 1: ಅವಶ್ಯಕ ವಿಷಯ : ಕನ್ನಡ**

**ಭಾಗ – 2: ಕಡ್ಡಾಯ ವಿಷಯಗಳು :**

1. ವ್ಯವಹಾರ ಸಂಪರ್ಕ (Business Communication)
2. ಆಧುನಿಕ ವ್ಯವಹಾರ ಕಾನೂನು (Modern Business Law)
3. ಕಂಪನಿಯ ಲೆಕ್ಕಶಾಸ್ತ್ರ-2 (Corporate Accounting-2)
4. ಅಂತಾರಾಷ್ಟ್ರೀಯ ವ್ಯವಹಾರಿಕ ಅರ್ಥಶಾಸ್ತ್ರ (International Business Economics)
5. ಹಣಕಾಸಿನ ನಿರ್ವಹಣೆ (Financial Management)
6. ವ್ಯವಹಾರಿಕ ಸಂಖ್ಯಾಶಾಸ್ತ್ರ-2 (Business Statistics-2)
7. ವ್ಯವಹಾರದಲ್ಲಿ ಗಣಕಶಾಸ್ತ್ರದ ಬಳಕೆ-3 (Computer Application in Business-3)

# ಬಿ.ಕಾಂ. ಭಾಗ-3

## Vನೇ ಸೆಮಿಸ್ಟರ್

**ಕಡ್ಡಾಯ ವಿಷಯಗಳು :**

1. ನಿರ್ವಹಣೆ ಲೆಕ್ಕಶಾಸ್ತ್ರ (Management Accounting)
2. ಆದಾಯ ತೆರಿಗೆ-1 (Income Tax-1)
3. ವೆಚ್ಚಶಾಸ್ತ್ರದ ಮೂಲಾಂಶಗಳು-1 (Elements of Costing-1)
4. ಸಣ್ಣ ವ್ಯವಹಾರ ಮತ್ತು ಆರ್ಥಿಕ ಅಭಿವೃದ್ಧಿ (Small Business and Economic Development)
5. ಭಾರತೀಯ ಹಣಕಾಸಿನ ಮಾರುಕಟ್ಟೆ (Indian Financial Markets-1)
6. ಸರಕು ಮತ್ತು ಸೇವಾ ತೆರಿಗೆ-1 (Goods and Service Tax-1)
7. ವ್ಯವಹಾರದಲ್ಲಿ ಗಣಕಯಂತ್ರದ ಬಳಕೆ-4 (Computer Application in Business-4)



## VIನೇ ಸೆಮಿಸ್ಟರ್

**ಕಡ್ಡಾಯ ವಿಷಯಗಳು :**

1. ಲೆಕ್ಕಪರಿಶೋಧನಾ ನಿರ್ವಹಣೆ (Auditing Practice)
2. ಭಾರತೀಯ ಅರ್ಥಶಾಸ್ತ್ರ (Indian Economics)
3. ವೆಚ್ಚಶಾಸ್ತ್ರದ ವಿಧಾನಗಳು ಮತ್ತು ತಂತ್ರಗಳು-2 (Costing Methods and Techniques-2)
4. ಆದಾಯ ತೆರಿಗೆ-2 (Income Tax-2)
5. ಭಾರತೀಯ ಹಣಕಾಸಿನ ಸೇವೆ (Indian Financial Services)
6. ಸರಕು ಮತ್ತು ಸೇವಾ ತೆರಿಗೆ (G.S.T-2)
7. ವ್ಯವಹಾರದಲ್ಲಿ ಗಣಕಯಂತ್ರದ ಬಳಕೆ-5 (Computer Applications in Business-5)

## ಕಾಲೇಜು ಒಕ್ಕೂಟ

ಕಾಲೇಜು ಒಕ್ಕೂಟವು ಸಾಂಸ್ಕೃತಿಕ ವೇದಿಕೆ, ಸಾಹಿತ್ಯ ಹಾಗೂ ಲಲಿತಕಲಾ ವೇದಿಕೆ, ಚರ್ಚಾಕೂಟ ವಿಭಾಗ, ವಿಜ್ಞಾನ ವೇದಿಕೆ, ಸಾಮಾಜಿಕ ವಿಜ್ಞಾನ ವೇದಿಕೆ, ವಾಣಿಜ್ಯ ವೇದಿಕೆ, ಮಹಿಳಾ ವೇದಿಕೆ ಮತ್ತು ಕ್ರಿಕೆಟ್, ಅಥ್ಲೆಟಿಕ್ಸ್, ಭಾರತೀಯ ಆಟ ಹಾಗೂ ಇತರ ಆಟಗಳನ್ನೊಳಗೊಂಡ ಕ್ರೀಡಾ ವಿಭಾಗವನ್ನು ಒಳಗೊಂಡಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಯನ್ನು ಗಮನದಲ್ಲಿರಿಸಿ, ವರ್ಷದುದ್ದಕ್ಕೂ ಸಹಪಠ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಆಗಾಗ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತದೆ.

## ಕಾಲೇಜು ಒಕ್ಕೂಟ ರಚನೆ

ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ರಚಿತವಾಗುವ ಕಾಲೇಜು ಒಕ್ಕೂಟ ಸಮಿತಿಯು ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ಈ ಸಮಿತಿಯ ಉಸ್ತುವಾರಿಯಲ್ಲಿ ವರ್ಷದುದ್ದಕ್ಕೂ ಸಹ-ಪಠ್ಯ ಚಟುವಟಿಕೆಗಳು ನಡೆಯುವವು. ಹಿರಿಯ ಪ್ರಾಧ್ಯಾಪಕರೊಂದಿಗೆ ಈ ಸಮಿತಿಯೇ ವರ್ಷದ ಕೊನೆಗೆ ಜರುಗುವ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಕೊಡಲಾಗುವ ಶಿಷ್ಯವೇತನಗಳಿಗೆ ಭಾಜನರಾದ ವಿಜೇತರನ್ನು ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಿಗೆ ಒಬ್ಬರಂತೆ ವರ್ಷದ ಶ್ರೇಷ್ಠ ವಿದ್ಯಾರ್ಥಿ ಮತ್ತು ಒಬ್ಬ ಶ್ರೇಷ್ಠ ಕ್ರೀಡಾಪಟುವಿನ ಆಯ್ಕೆಯನ್ನು ಮಾಡುವ ಹೊಣೆಯನ್ನು ನಿಭಾಯಿಸುತ್ತದೆ.

## ವರ್ಗ ಪ್ರತಿನಿಧಿಗಳ ಆಯ್ಕೆ

ಪದವಿಯ ಪ್ರತಿ ವರ್ಗದಿಂದ ಒಬ್ಬ ವಿದ್ಯಾರ್ಥಿ/ನಿಯನ್ನು ವರ್ಗ ಪ್ರತಿನಿಧಿ ಎಂದು ಶೈಕ್ಷಣಿಕ ಅರ್ಹತೆಯ ಆಧಾರದ (Merit Base) ಮೇಲೆ ಆಯ್ಕೆ



Scanned with OKEN Scanner

ಮಾಡಲಾಗುವದು. ಮೂಲ ಫಲಿತಾಂಶವನ್ನು ಆಧರಿಸಿ ಪ್ರತಿ ವರ್ಗದ ಜೇಷ್ಠತಾ ಪಟ್ಟಿಯನ್ನು ಈ ಕೆಳಗಿನ ನಿಯಮಗಳ ಅನುಸಾರವಾಗಿ ತಯಾರಿಸಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ/ನಿಯನ್ನು ಆ ವರ್ಗದ ಪ್ರತಿನಿಧಿ/ ಕಾರ್ಯದರ್ಶಿ ಎಂದು ಆಯ್ಕೆ ಮಾಡಲಾಗುವದು.

1. ಪದವಿ ಭಾಗ -1ರ ವರ್ಗ ಪ್ರತಿನಿಧಿಯನ್ನು ಹಿಂದಿನ ವರ್ಷದ ಪಿಯುಸಿ-2 ರ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ ಪಡೆದ ಒಟ್ಟು ಅಂಕಗಳನ್ನು ಗಣನೆಗೆ ತೆಗೆದುಕೊಂಡು ಆಯ್ಕೆ ಮಾಡಲಾಗುವದು.

2. ಪದವಿ ಭಾಗ-2 ಹಾಗೂ 3ರ ವರ್ಗ ಪ್ರತಿನಿಧಿಗಳನ್ನು ಹಿಂದಿನ ಸೆಮೆಸ್ಟರ್ ಪರೀಕ್ಷೆಯಲ್ಲಿ **3 ಐಚ್ಛಿಕ ವಿಷಯಗಳಲ್ಲಿ** ಪಡೆದ ಹೆಚ್ಚು ಅಂಕಗಳನ್ನು ಗಣನೆಗೆ ತೆಗೆದುಕೊಂಡು ಆಯ್ಕೆ ಮಾಡಲಾಗುವದು-100 ಅಂಕಗಳು. (80+20)

3. ಹಿಂದಿನ ಸೆಮೆಸ್ಟರ್ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಉತ್ತೀರ್ಣರಾದ ವಿದ್ಯಾರ್ಥಿ/ನಿಯರು ಹಾಗೂ ಈ ಮಹಾವಿದ್ಯಾಲಯದಲ್ಲಿಯೇ ಓದಿದ ವಿದ್ಯಾರ್ಥಿ/ನಿಯರು ಮಾತ್ರ ಪ್ರತಿನಿಧಿಗಳಾಗಲು ಅರ್ಹರು (ಪದವಿ ಪ್ರಥಮ ವರ್ಷ ಹೊರತುಪಡಿಸಿ).

4. ಮರು ಮೌಲ್ಯಮಾಪನ ಸೌಲಭ್ಯದ ಲಾಭ ಪಡೆದ ವಿದ್ಯಾರ್ಥಿಗಳನ್ನು ವರ್ಗ ಪ್ರತಿನಿಧಿ ಸ್ಥಾನಕ್ಕೆ ಪರಿಗಣಿಸಲಾಗುವದಿಲ್ಲ. (ವರ್ಷದ ಕೊನೆಗೆ ಶಿಷ್ಯವೇತನಗಳನ್ನು ನೀಡುವಾಗ ಮಾತ್ರ ಮರುಮೌಲ್ಯಮಾಪನದಲ್ಲಿ ಪಡೆದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವದು)

ಆಯ್ಕೆಯಾದ ವರ್ಗ ಪ್ರತಿನಿಧಿಗಳಿಗೆ ಸಾಂಸ್ಕೃತಿಕ ವೇದಿಕೆ, ಸಾಹಿತ್ಯ ಹಾಗೂ ಲಲಿತಕಲಾ ವೇದಿಕೆ, ಚರ್ಚಾಕೂಟ, ವಿಜ್ಞಾನ ವೇದಿಕೆ, ಸಮಾಜ ವಿಜ್ಞಾನ ವೇದಿಕೆ, ವಾಣಿಜ್ಯ ವೇದಿಕೆ, ಮಹಿಳಾ ವೇದಿಕೆ ಹಾಗೂ ಕ್ರೀಡಾ ವಿಭಾಗಗಳ ಕಾರ್ಯದರ್ಶಿಗಳೆಂದು ಜವಾಬ್ದಾರಿ ವಹಿಸಲಾಗುವದು.

ಸಾಂಸ್ಕೃತಿಕ ವೇದಿಕೆ ಮತ್ತು ಸಾಹಿತ್ಯ ಹಾಗೂ ಲಲಿತಕಲಾ ವೇದಿಕೆ ವಿಭಾಗಗಳನ್ನು ಬಿ.ಎ., ಬಿ.ಎಸ್‌ಸಿ., ಮತ್ತು ಬಿ.ಕಾಂ. ಅಂತಿಮ ವರ್ಷದ ವರ್ಗ ಪ್ರತಿನಿಧಿಗಳಿಗೇ ಮೀಸಲಿಡಲಾಗಿದ್ದು, ಅವುಗಳನ್ನು ಪ್ರತಿ ವರ್ಷ ಕ್ರಮಾನುಸಾರ ಅದಲು-ಬದಲು ಮಾಡಲಾಗುವದು. ವರ್ಷದ ಆರಂಭದಲ್ಲಿ ಜರುಗುವ ಒಕ್ಕೂಟದ ಉದ್ಘಾಟನಾ ಸಮಾರಂಭದ ಉಸ್ತುವಾರಿಯನ್ನು ಸಾಹಿತ್ಯ ಹಾಗೂ ಲಲಿತಕಲಾ ವೇದಿಕೆಯ ಕಾರ್ಯದರ್ಶಿ ವಹಿಸಿ, ಅಂದಿನ ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಉಪಸ್ಥಿತರಿರುತ್ತಾರೆ. ಸಾಂಸ್ಕೃತಿಕ ಚಟುವಟಿಕೆಗಳ ವೇದಿಕೆಯ ಕಾರ್ಯದರ್ಶಿಯೇ ಪ್ರತಿಭಾ ಪುರಸ್ಕಾರ ಸಮಾರಂಭದ ಉಸ್ತುವಾರಿ ವಹಿಸಿ, ವೇದಿಕೆಯಲ್ಲಿ ಉಪಸ್ಥಿತರಿರುತ್ತಾರೆ.

ಪ್ರತಿವರ್ಷ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಯುವಜನೋತ್ಸವವನ್ನು ಅಂತರ್ ಮಹಾವಿದ್ಯಾಲಯ ಮಟ್ಟದಲ್ಲಿ / ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಸಲಾಗುವದು.



ವಿದ್ಯಾರ್ಥಿಗಳು ತಮ್ಮಲ್ಲಿದ್ದ ಪ್ರತಿಭೆ (ಭಾಷಣ, ಚರ್ಚೆ, ರಸಪ್ರಶ್ನೆ, ನಾಟಕ, ಏಣಕು, ರಂಗೋಲಿ, ಚಿತ್ರಕಲೆ, ಸಮೂಹ ಗೀತೆ ಇತ್ಯಾದಿ)ಯನ್ನು ಪ್ರದರ್ಶಿಸಲು ಈ ಯುವಜನೋತ್ಸವ ಒಳ್ಳೇ ಅವಕಾಶ ಕಲ್ಪಿಸುತ್ತದೆ.

**ವರ್ಷದ ಶ್ರೇಷ್ಠ ವಿದ್ಯಾರ್ಥಿ ಆಯ್ಕೆ :**

ವರ್ಷದ ಕೊನೆಯಲ್ಲಿ ಬಿ.ಎ. ಬಿ.ಎಸ್‌ಸಿ ಹಾಗೂ ಬಿ.ಕಾಂ ಅಂತಿಮ ವರ್ಗದ ಅರ್ಹ ವಿದ್ಯಾರ್ಥಿ/ನಿಯನ್ನು ಪ್ರತಿ ವಿಭಾಗದ ಶ್ರೇಷ್ಠ ವಿದ್ಯಾರ್ಥಿ ಎಂದು ಆಯ್ಕೆ ಮಾಡಲಾಗುವದು. ಈ ಆಯ್ಕೆಯ ಪ್ರಮುಖ ಅಂಶಗಳು ಹೀಗಿವೆ :

1. 100 ಅಂಕಗಳ ಶೈಕ್ಷಣಿಕ ಅರ್ಹತೆಯನ್ನು (Merit) ಪ್ರಮುಖ ಆಧಾರವಾಗಿ ಪರಿಗಣಿಸಲಾಗುವದು.

2. ಪದವಿ ಭಾಗದ 1 ರಿಂದ 5 ಸೆಮೆಸ್ಟರ್‌ಗಳಲ್ಲಿ ಎಲ್ಲಾ ವಿಷಯಗಳಲ್ಲಿ ಪಾಸಾಗಿದ್ದು, **3 ಐಚ್ಛಿಕ ವಿಷಯಗಳಲ್ಲಿ** ಗಳಿಸಿದ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವದು.

3. ನಮ್ಮ ಮಹಾವಿದ್ಯಾಲಯದಲ್ಲಿಯೇ ಪದವಿ ಭಾಗ -1ನೇ ಸೆಮೆಸ್ಟರ್‌ನಿಂದ 6ನೇ ಸೆಮೆಸ್ಟರ್‌ವರೆಗೆ ಸತತವಾಗಿ ಓದುತ್ತಿದ್ದು, ಮೊದಲ ಪ್ರಯತ್ನದಲ್ಲಿಯೇ ಉತ್ತೀರ್ಣರಾಗಿರಬೇಕು.

4. ಪ್ರತಿಭಾ ಪುರಸ್ಕಾರ ಸಮಾರಂಭದ ಅಂಗವಾಗಿ ಮಹಾವಿದ್ಯಾಲಯದಲ್ಲಿ ಜರುಗುವ ಪ್ರಬಂಧ, ಭಾಷಣ, ಗಾಯನ, ಕಾವ್ಯ ರಚನೆ, ರಂಗೋಲಿ, ಚಿತ್ರಕಲೆ, ರಸಪ್ರಶ್ನೆ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿಯ **ವಿಜೇತರ ಸಾಧನೆ**ಯನ್ನು ಗಣನೆಗೆ ತೆಗೆದುಕೊಳ್ಳಲಾಗುವದು-50 ಅಂಕಗಳು.

5. ಎನ್.ಸಿ.ಸಿ. ಅಥವಾ ಎನ್.ಎಸ್.ಎಸ್. ಘಟಕಗಳಲ್ಲಿ ವಿದ್ಯಾರ್ಥಿಗಳು ತೋರಿದ ವಿಶೇಷಸಾಧನೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವದು.

6. ವಿದ್ಯಾರ್ಥಿಗಳ ಸಚ್ಚಾರಿತ್ರ್ಯವನ್ನು ಕೂಡ ಗಮನಿಸಲಾಗುವದು. (05 ಅಂಕ)

**ವರ್ಷದ ಶ್ರೇಷ್ಠ ಕ್ರೀಡಾಪಟು :**

ಅಂತರ್ ಕಾಲೇಜು, ಅಂತರ್ ವಿಶ್ವವಿದ್ಯಾಲಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ, ಪ್ರದರ್ಶಿಸಿದ ಪ್ರತಿಭೆ-ಸಾಧನೆಗಳ ಆಧಾರದ ಮೇಲೆ ಒಳ್ಳೆಯ ನಡತೆ, ಚಾರಿತ್ರ್ಯ, ಕ್ರೀಡಾ ಮನೋಭಾವ ಹೊಂದಿದ ಒಬ್ಬ ವಿದ್ಯಾರ್ಥಿಯನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುವದು.

**ವೈಯಕ್ತಿಕ ವೀರಾಗ್ರಣಿ :**

ಮಹಾವಿದ್ಯಾಲಯದ ಕ್ರೀಡಾ ಸ್ಪರ್ಧೆಗಳಲ್ಲಿಯ ವಿದ್ಯಾರ್ಥಿ/ನಿಯರ ಸಾಧನೆಯನ್ನು ಆಧರಿಸಿ ಪುರುಷ ಹಾಗೂ ಮಹಿಳಾ ವೈಯಕ್ತಿಕ ವೀರಾಗ್ರಣಿ ಎಂದು ಪ್ರತ್ಯೇಕವಾಗಿ ಆಯ್ಕೆ ಮಾಡಿ ಅವರಿಗೆ ಪ್ರಶಸ್ತಿ ಫಲಕ (Shield) ನೀಡಲಾಗುವದು.



Scanned with OKEN Scanner

## VARIOUS UNITS WORKING IN OUR COLLEGE

1. IQAC (Internal Quality Assuarance Cell).
2. Carrier Guidance & Placement Cell.
3. Grievance Redressal Cell.
4. Antiragging & Prevention of Sexual Harassment Cell.
5. SC/ST Cell.
6. Red Cross Unit.
7. Heritage Club.

* * *



## ಅಂಗ ಸಂಸ್ಥೆಗಳು

| | |
|---|---|
| * ವಿಜಯ ಮಹಾಂತೇಶ ಪ್ರೌಢಶಾಲೆ. ಹುನಗುಂದ | 1915 |
| * ವಿಜಯ ಮಹಾಂತೇಶ ಉಚಿತ ಪ್ರಸಾದ ನಿಲಯ. ಹುನಗುಂದ | 1945 |
| * ಅಕ್ಕನ ಬಳಗ. ಹುನಗುಂದ | 1953 |
| * ವ್ಹಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ. ವಿಜ್ಞಾನ ಹಾಗೂ ವಿಜಯ ಶಂಕರಪ್ಪ ವಾಣಿಜ್ಯ ಮಹಾವಿದ್ಯಾಲಯ. ಹುನಗುಂದ | 1967 |
| * ವ್ಹಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ. ವಿಜ್ಞಾನ ಹಾಗೂ ವಿಜಯ ಶಂಕ್ರಪ್ಪ ವಾಣಿಜ್ಯ ಪದವಿ ಪೂರ್ವ ಕಾಲೇಜು. ಹುನಗುಂದ | 1967 |
| * ವ್ಯಾಯಾಮ ಕೇಂದ್ರ (ಜಿಮ್) | |
| * ವಿ.ಮ. (ಶ್ರೀ ಗು.ಮ.ಗು. ಸ್ಮಾರಕ) ಬಾಲಕಿಯರ ಪ್ರೌಢಶಾಲೆ. ಹುನಗುಂದ | 1982 |
| * ಸಿ.ವ್ಹಿ.ಸಿ. ರೂರಲ್ ಪಾಲಿಟೆಕ್ನಿಕ್. ಹುನಗುಂದ | 1983 |
| * ಐಹೊಳೆ ಪ್ರೌಢಶಾಲೆ. ಐಹೊಳೆ | 1984 |
| * ಶ್ರೀ ಗುರುಸಿದ್ಧೇಶ್ವರ ಪ್ರೌಢಶಾಲೆ. ತುಂಬ | 1989 |
| * ಔಷಧ ವಿಜ್ಞಾನ ವಿದ್ಯಾಲಯ. ಹುನಗುಂದ | 1991 |
| * ಕಾನ್ವೆಂಟ್ ಮಾದರಿಯ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ. ಹುನಗುಂದ | 1991 |
| * ವಿಜಯ ಮಹಾಂತೇಶ ಉಚಿತ ಪ್ರಸಾದ ನಿಲಯ. ತುಂಬ | 1991 |
| * ವಿ.ಮ. ಪೋಸ್ಟ್ ಮೆಟ್ರಿಕ್ ಬಾಲಕರ ಹಾಸ್ಟೆಲ್. ಹುನಗುಂದ | 1997 |
| * ವಿ.ಮ. ಪೋಸ್ಟ್ ಮೆಟ್ರಿಕ್ ಬಾಲಕಿಯರ ಹಾಸ್ಟೆಲ್. ಹುನಗುಂದ | 1997 |
| * ಮಾದರಿಯ ಪ್ರೌಢಶಾಲೆ. ಹುನಗುಂದ | 2000 |
| * ವಿ.ಮ. ಸಂಗೀತ ಶಾಲೆ. ಹುನಗುಂದ | 2000 |
| * ವಿ.ಮ. ಆಂಗ್ಲ ಮಾಧ್ಯಮ ಪ್ರೌಢಶಾಲೆ. ಹುನಗುಂದ | 2001 |
| * ಮಾದರಿಯ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ. ಐಹೊಳೆ | 2001 |
| * ಮಾದರಿಯ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ. ತುಂಬ | 2001 |
| * ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ. ಹುನಗುಂದ | 2001 |
| * ಪಾಲಿಟೆಕ್ನಿಕ್ ಹಾಸ್ಟೆಲ್. ಹುನಗುಂದ | 2001 |
| * ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ. ಹುನಗುಂದ | 2005 |
| * ವಿ.ಮ. ಪೂರ್ವ ಪ್ರಾಥಮಿಕ ಶಾಲೆ. ಹುನಗುಂದ | 2014 |
| * ವಿ.ಮ. ಕನ್ನಡ ಕಿರಿಯ ಪ್ರಾಥಮಿಕ ಶಾಲೆ. ಹುನಗುಂದ | 2014 |
| * ವಿ.ಮ. ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ. ಹುನಗುಂದ | 2016 |



Scanned with OKEN Scanner



ಇತಿಹಾಸ ವಿಷಯದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತಿರುವ ಡಾ. ರು.ಮ. ಷಡಕ್ಷರಯ್ಯ ವಿಶ್ರಾಂತ ಪ್ರಾಧ್ಯಾಪಕರು, ಕ.ವಿ.ವಿ. ಧಾರವಾಡ



ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿರುವ ಗದಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಮಹಾಂತದೇವರು



ವಿದ್ಯಾರ್ಥಿಗಳ ಹಬ್ಬ ವೀಕ್ಷಿಸುತ್ತಿರುವ ವಿ.ಮ.ವಿ.ವ. ಸಂಘದ ಆಡಳಿತಾಧಿಕಾರಿ ಶ್ರೀ ಎ.ಓ. ಬಿರಾದಾರ, ಶ್ರೀ ಸಂಗಣ್ಣ ಚಿನಿವಾಲರ & ಪ್ರಾಚಾರ್ಯ ಎಸ್.ಕೆ. ಮಠ & ಸಿಬ್ಬಂದಿ



ಮಹಾವಿದ್ಯಾಲಯದ ಆವರಣದಲ್ಲಿ ಶ್ರಮದಾನ ಮಾಡುತ್ತಿರುವ ಎನ್.ಎಸ್.ಎಸ್. ಸ್ವಯಂ ಸೇವೆಕರು



ದತ್ತು ಗ್ರಾಮ ರಾಮವಾಡಗಿಯಲ್ಲಿ ಶ್ರಮದಾನ ಮಾಡುತ್ತಿರುವ ಎನ್.ಎಸ್.ಎಸ್. ಸ್ವಯಂ ಸೇವೆಕರು



ಕಬಡ್ಡಿ




ಕಬಡ್ಡಿ ಪ್ರಶಸ್ತಿ ಸ್ವೀಕಾರ



ಕಬಡ್ಡಿ ಉದ್ಘಾಟನೆ

Scanned with OKEN Scanner



ಕರ್ನಾಟಕ-ಗೋವಾ ಎನ್.ಸಿ.ಸಿ. ಬ್ರಿಗೇಡಿಯರ್
ಕ. ಡಿ.ಎಂ. ಪೂರ್ಣಿಮರ ಅವರಿಂದ ಬೆಸ್ಟ ಇನ್ಸಿಟ್ಯೂಟ್ ಪ್ರಶಸ್ತಿ
ಸ್ವೀಕರಿಸುತ್ತಿರುವ ಲೆ.ಎನ್.ಬಿ. ಚಳಗೇರಿ & ಪ್ರೊ. ಎನ್.ಆರ್. ನಾಗನ್ನವರ



ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ
ಮಾತನಾಡುತ್ತಿರುವ ಡಾ. ವೀರಣ್ಣ ಎಸ್. ಹವಾಲ್ದಾರ



ಒಂದರಿಂದ ಐದನೇ ಸೆಮಿಸ್ಟರ್‌ಗಳಲ್ಲಿ ಗಣಿತಶಾಸ್ತ್ರ
ವಿಷಯದಲ್ಲಿ ನೂರಕ್ಕೆ ನೂರು ಅಂಕಗಳಿಸಿದ ಕುಮಾರಿ
ಮಹಾದೇವಿ ಜಾಲಿಹಾಳ ಅವರಿಗೆ ಮಾನ್ಯ ಗೌರವಕಾರ್ಯದರ್ಶಿಗಳಾದ
ಶ್ರೀ ಬಿ. ಎಂ. ಕೊಕ್ಕಾನೆಯವರಿಂದ



ಬಿ.ಕಾಂ. ಅಂತಿಮ ವರ್ಷದ ಶ್ರೇಷ್ಠ ವಿದ್ಯಾರ್ಥಿನಿ
ಕು. ಜ್ಯೋತಿ ಹಳ್ಳೂರ ವರ್ಷದ ಶ್ರೇಷ್ಠ ಕ್ರೀಡಾಪಟು
ಬ್ಯಾಡಮಿಂಟ್ ಚಾಂಪಿಯನ್ ನಾಯಕಿ



ಅಧ್ಯಕ್ಷತೆ ವಹಿಸಿ ಮತನಾಡುತ್ತಿರುವ
ಮಹಾವಿದ್ಯಾಲಯದ
ಪ್ರಾಚಾರ್ಯ ಶ್ರೀಮತಿ ಎಸ್.ಕೆ. ಮಠರವರು




ಉಚಿತ ಆರೋಗ್ಯ ತಪಾಶಣಾ ಶಿಬಿರ ವೀಕ್ಷೀಸುತ್ತಿರುವ
ಪ್ರಾಚಾರ್ಯ (ಶ್ರೀಮತಿ) ಎಸ್.ಕೆ. ಮಠ &
ಭಾಗವಹಿಸಿದ ವಿದ್ಯಾರ್ಥಿಗಳು



ನೆರೆಪೀಡಿತ ಐಹೊಳೆ ಸ್ಮಾರಕಗಳ ಸ್ವಚ್ಛತೆಯಲ್ಲಿ
ನಿರತರಾದ ಪರಂಪರೆ ಕೂಟದ ವಿದ್ಯಾರ್ಥಿಗಳು



ವಿಶೇಷ ಸಾಧನೆ ಮಾಡಿದ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ
ಪ್ರೊ. ಬಿ.ಬಿ. ಕಡ್ಲಿ, ಪ್ರೊ. ಆರ್.ಪಿ. ಮಹೀಂದ್ರಕರ ಹಾಗೂ
ಪ್ರೊ. ಎಸ್. ಬಿ. ಚಳಗೇರಿಯವರಿಗೆ ಸನ್ಮಾನ



Library



Women's Hostel




Canteen



Botanical Garden




NSS



NCC



Laboratory Building



Gymnastic Hall

Scanned with OKEN Scanner




Administrative Block



Laboratory



Library



Boys' Hostel



Class Rooms

**V.M.V.V. Sangha's**

## V. M. K. S. R. VASTRAD ARTS, SCIENCE & VIJAY SHANKARAPPA BELLIHAL COMMERCE COLLEGE, HUNGUND-587 118 Dt: Bagalkot

Mallikarjun Offset Hungund 9945196601

Scanned with OKEN Scanner